# ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ. ಎಲ್. ನಂಬ್ರ 1408

ಪ್ರಧಾನ ಕಚೇರಿ: ಬಾಳಿಗಾ ಟವರ್ಸ್, 4ನೇ ಮಹಡಿ, ಸರ್ವಿಸ್ ಬಸ್ ನಿಲ್ದಾಣದ ಬಳಿ,
ಉಡುಪಿ-576101. ದೂರವಾಣಿ: 0820-2521143/8494904812
ವೆಬ್‌ಸೈಟ್: www.teachersbank.co.in ಇಮೈಲ್: admin@teachersbank.co.in


## ಮ್ಯಾನೇಜರ್ ಹಾಗೂ ಜೂನಿಯರ್ ಅಸಿಸ್ಟೆಂಟ್ ಹುದ್ದೆಯ ನೇಮಕಾತಿಗಾಗಿ ಅರ್ಜಿ ಅಹ್ವಾನ ಪ್ರಕಟಣೆ

1915 ರಲ್ಲಿ ಸ್ಥಾಪನೆಯಾಗಿ ಇದೀಗ 107 ವರ್ಷಗಳನ್ನು ಪೂರೈಸಿದ್ದು, ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾನ್ಯತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಅತ್ಯುತ್ತಮ ವೇತನ ಗಳಿಕೆದಾರರ ಬ್ಯಾಂಕ್ 'ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕ್' ನಿಯಮಿತ, ಉಡುಪಿಯಲ್ಲಿ ಪ್ರಧಾನ ಕಛೇರಿಯನ್ನು ಹೊಂದಿದ್ದು, ಕರ್ನಾಟಕದಲ್ಲಿ 14 ಶಾಖೆಗಳೊಂದಿಗೆ 650 ಕೋಟಿಗೂ ಮಿಕ್ಕಿ ವ್ಯವಹಾರ ನಡೆಸುತ್ತಿದೆ.

ಪ್ರಸ್ತುತ ಅರ್ಹ ಅಭ್ಯರ್ಥಿಗಳಿಂದ ಮ್ಯಾನೇಜರ್ ಹಾಗೂ ಜೂನಿಯರ್ ಅಸಿಸ್ಟೆಂಟ್ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಜಿ ಅಹ್ವಾನಿಸಲಾಗಿದೆ.

| ಕ್ರ ಸಂ. | ಹುದ್ದೆಯ ವಿವರಗಳು | ಒಟ್ಟು ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಮತ್ತು ಅನುಭವ |
|---|---|---|---|
| 1 | ಮ್ಯಾನೇಜರ್ | 1 | ಮಾನ್ಯತೆ ಹೊಂದಿರುವ ವಿಶ್ವವಿದ್ಯಾನಿಲಯದ ಯಾವುದೇ ಪದವಿಯೊಂದಿಗೆ ಅರ್ಹತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್. ಕನಿಷ್ಠ 1 ವರ್ಷದ ಬ್ಯಾಂಕಿಂಗ್ ಅನುಭವ ಹೊಂದಿರಬೇಕು. |
| 2 | ಜೂನಿಯರ್ ಅಸಿಸ್ಟೆಂಟ್ | 23 | ಮಾನ್ಯತೆ ಹೊಂದಿರುವ ವಿಶ್ವವಿದ್ಯಾನಿಲಯದ ಯಾವುದೇ ಪದವಿ ಅಥವಾ ಸ್ನಾತಕೋತ್ತರ ಪದವಿ. ಸಹಕಾರಿ ಡಿಪ್ಲೋಮಾ ಹೊಂದಿದವರಿಗೆ ಆದ್ಯತೆ. ಪದವಿ ಅಥವಾ ಸ್ನಾತಕೋತ್ತರ ಪದವಿಯೊಂದಿಗೆ ಕನಿಷ್ಠ 6 ತಿಂಗಳ ಕಂಪ್ಯೂಟರ್ ಜ್ಞಾನವನ್ನು ಹೊಂದಿರಬೇಕು. |
| 3 | ಜೂನಿಯರ್ ಅಸಿಸ್ಟೆಂಟ್-ಟೆಕ್ನಿಕಲ್ | 1 | ಮಾನ್ಯತೆ ಹೊಂದಿರುವ ವಿಶ್ವವಿದ್ಯಾನಿಲಯದಿಂದ ಕಂಪ್ಯೂಟರ್ ಸೈಯನ್ಸ್‌ನಲ್ಲಿ ಬಿ.ಇ. ಪದವಿ ಅಥವಾ ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಸ್ನಾತಕೋತ್ತರ ಪದವಿ (ಎಂ.ಸಿ.ಎ) |
| 4 | ಜೂನಿಯರ್ ಅಸಿಸ್ಟೆಂಟ್-ಲೀಗಲ್ | 1 | ಮಾನ್ಯತೆ ಹೊಂದಿರುವ ವಿಶ್ವವಿದ್ಯಾನಿಲಯದಿಂದ ಕಾನೂನಿನಲ್ಲಿ ಪದವಿಯೊಂದಿಗೆ ಬಾರ್ ಕೌನ್ಸಿಲ್ ಸದಸ್ಯತನ ಹೊಂದಿರಬೇಕು. ಕನಿಷ್ಠ 6 ತಿಂಗಳ ಕಂಪ್ಯೂಟರ್ ಜ್ಞಾನದೊಂದಿಗೆ, ಸೇವಾ ಅನುಭವ ಹೊಂದಿರುವವರಿಗೆ ಆದ್ಯತೆ. |

********

| | |
|---|---|
| **ವಯೋಮಿತಿ** (ದಿನಾಂಕ08.12.2022 ರಲ್ಲಿದ್ದಂತೆ) | 1) ಸಾಮಾನ್ಯ ವರ್ಗ-ಗರಿಷ್ಠ ವಯೋಮಿತಿ 35 ವರ್ಷ.<br>2) ಹಿಂದುಳಿದ ಜಾತಿ/ಹಿಂದುಳಿದ ವರ್ಗ-ಗರಿಷ್ಠ ವಯೋಮಿತಿ 38 ವರ್ಷ<br>3) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ-ಗರಿಷ್ಠ ವಯೋಮಿತಿ 40 ವರ್ಷ |

1) ಅರ್ಹ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ **www.teachersbank.co.in** ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ, ಸಂಬಂಧಿತ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.
2) ಅರ್ಜಿ ಶುಲ್ಕ ರೂ.1,000.00 (ರೂ.ಒಂದು ಸಾವಿರ ಮಾತ್ರ) ನ್ನು ಆನ್‌ಲೈನ್ ಮೂಲಕ ಪಾವತಿಸುವುದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
3) ಅರ್ಜಿ ಸಲ್ಲಿಸಲು, ಸಂಬಂಧಪಟ್ಟ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಹಾಗೂ ಶುಲ್ಕ ಪಾವತಿ ಮಾಡಲು ನಿಗದಿಪಡಿಸಿದ ದಿನಾಂಕ: 21.11.2022 ರಿಂದ 08.12.2022
4) ಅಭ್ಯರ್ಥಿಯನ್ನು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು.
5) ಅರ್ಜಿ ಸಲ್ಲಿಸಲು ಕನಿಷ್ಠ ವಯೋಮಿತಿ 21 ವರ್ಷ.
6) ಹೆಚ್ಚಿನ ವಿವರ ಹಾಗೂ ಸೂಚನೆಗಳಿಗೆ ಬ್ಯಾಂಕಿನ ವೆಬ್‌ಸೈಟ್‌ನ್ನು ವೀಕ್ಷಿಸುವುದು.
7) ಅಭ್ಯರ್ಥಿಗಳು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬಹುದು. ಅಂಚೆ ಮೂಲಕ ಸಲ್ಲಿಸುವ ಅರ್ಜಿಗಳು ಸ್ವೀಕಾರಾರ್ಹವಲ್ಲ.

**ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ**

**ಸಹಿ/- ಶ್ರೀ ಮಂಜುನಾಥ ಶೆಟ್ಟಿ**
ಮಹಾಪ್ರಬಂಧಕರು (ಪ್ರಭಾರ)
ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಉಡುಪಿ